**<u>ಸಾಕ್ಷಿಯನ್ನು ಮಧ್ಯಂತರ ಅರ್ಜಿ 18 ಮತ್ತು 19 ರ ಮೇಲಿನ ಆದೇಶದಂತೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ: 09.01.2023</u>**

**ಪಾಟೀ ಸವಾಲು - ವಾದಿ ಪರ ವಕೀಲರಿಂದ**

5) ನಾನು ಖಾಯಂ ಬೆಂಗಳೂರು ವಾಸಿ ಎಂದರೆ ಸರಿ. ನಾನು ಖುದ್ದಾಗಿ ದಾವಾ ಸ್ವತ್ತನ್ನು ನೋಡಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತನ್ನು ಖರೀದಿ ಮಾಡಿದ್ದೇನೆ. ದಾವಾ ಸ್ವತ್ತು ಮೂಲತಃ ವೆಂಕಟಪ್ಪನಿಗೆ ಸೇರಿತ್ತು. ವೆಂಕಟಪ್ಪನಿಗೆ ಅದು ಪಿತ್ರಾರ್ಜಿತವಾಗಿ ಬಂದಿತ್ತು. 1957 ರಲ್ಲಿ ವೆಂಕಟಪ್ಪನ ತಂದೆ ದಾವಾ ಸ್ವತ್ತನ್ನು ಖರೀದಿ ಮಾಡಿದ್ದರು ಎಂದರೆ ಅದರ ಬಗ್ಗೆ ಗೊತ್ತಿಲ್ಲ, ಆದರೆ ಅದು ಅವರ ಪಿತ್ರಾರ್ಜಿತ ಆಸ್ತಿ. ವೆಂಕಟಪ್ಪನಿಗೆ ಒಬ್ಬ ಮಗ ಇರುವಂತೆ ನನಗೆ ಜ್ಞಾಪಕವಿದೆ. ನಾನು ವೈಯಕ್ತಿಕವಾಗಿ ವ್ಯವಸಾಯಗಾರನಲ್ಲ ಎಂದರೆ ನಾನು ವ್ಯವಸಾಯಗಾರ ಕೂಡ ಹೌದು, ಆದರೆ ವ್ಯಾಪಾರ ಮಾಡುತ್ತೇನೆ. ನನಗೆ ದಾವಾ ಸ್ವತ್ತಿನ ಸುತ್ತ-ಮುತ್ತ ಯಾವುದೇ ಬೇರೆ ಜಮೀನು ಇಲ್ಲ. ದೇವನಹಳ್ಳಿ ತಾಲ್ಲೂಕಿನಲ್ಲಿ ನನಗೆ ಬೇರೆ ಜಮೀನು ಇರುತ್ತದೆ. ನನಗೆ ಯಾವ ಗ್ರಾಮದಲ್ಲಿ ಬೇರೆ ಜಮೀನು ಇದೆ ಎಂದು ನೆನಪಿಲ್ಲ, ಆದರೆ ಜಮೀನು ಇರುತ್ತದೆ. ನನಗೆ 500 ಎಕರೆ ಇದೆಯೇ? ಎಂದರೆ ಅಷ್ಟು ಜಮೀನು ಇಲ್ಲ, ಆದರೆ ಸಣ್ಣ ಪುಟ್ಟ ವಿಸ್ತೀರ್ಣ ಇದೆ. ಸಣ್ಣ ಪುಟ್ಟ ಜಮೀನು ಎಷ್ಟು ಎಕರೆ ಇದೆ ಅದರ ಚೆಕ್ಕುಬಂದಿ ಏನು ಹೇಳಲು ಆಗುತ್ತದೆಯೇ? ಎಂದರೆ ದಾವಾ ಸ್ವತ್ತಿನ ಬಗ್ಗೆ ಕೇಳಿದರೆ ಹೇಳಬಲ್ಲೆ, ಬೇರೆ ಜಮೀನುಗಳ ಬಗ್ಗೆ ಹೇಳಲು ಆಗುವುದಿಲ್ಲ.

6) ಕ್ರಯ ಮಾಡುವ ಮುನ್ನ 1 ನೇ ಪ್ರತಿವಾದಿ ಪಹಣಿಗಳು ಮತ್ತು ವಂಶವೃಕ್ಷವನ್ನು ಕೊಟ್ಟಿದ್ದರೆಂದು ಹೇಳಿದ್ದು, ಆ ದಾಖಲೆಗಳನ್ನು ನಾನು ಹಾಜರು ಮಾಡಿ

ಗುರುತಿಸಿಕೊಂಡಿಲ್ಲ ಎಂದರೆ ಇನ್ನು ಮುಂದೆ ಹಾಜರು ಮಾಡುತ್ತೇನೆ. 1ನೇ ಪ್ರತಿವಾದಿ ಕೂಡ ವ್ಯವಸಾಯಗಾರನೆಂದರೆ ಸರಿ. ಆತನಿಗೆ ಒಬ್ಬ ಹೆಂಡತಿ, ಒಬ್ಬ ಮಗಳು ಮತ್ತು ಮೂರು ಜನ ಗಂಡಮಕ್ಕಳು ಇದ್ದಾರೆ ಎಂದರೆ ನನಗೆ ಕೊಟ್ಟ ವಂಶವೃಕ್ಷದ ಪ್ರಕಾರ ಅವರಿಗೆ ಒಬ್ಬನೇ ಮಗ. ಸದರಿ ವಂಶವೃಕ್ಷವನ್ನು 1ನೇ ಪ್ರತಿವಾದಿ ಪ್ರಮಾಣ ಪತ್ರದ ಮೂಲಕ ಕೊಟ್ಟಿದ್ದರೋ? ಅಥವಾ ಗ್ರಾಮ ಲೆಕ್ಕಿಗರಿಂದ ಪಡೆದಿದ್ದರೋ? ಎಂದರೆ ನನಗೆ ನೆನಪಿಲ್ಲ. ವಂಶವೃಕ್ಷಕ್ಕೆ 1ನೇ ಪ್ರತಿವಾದಿ ಮತ್ತು ಆತನ ಮಗ ಇಬ್ಬರೂ ಸಹಿ ಮಾಡಿದ್ದರು. 1ನೇ ಪ್ರತಿವಾದಿಯ ಮಗನ ಹೆಸರು ನನಗೆ ಜ್ಞಾಪಕವಿಲ್ಲ. ನನಗೆ ಈ ದಾವೆಯ ಸಮನ್ಸ್ ಜೊತೆ ವಾದ ಪತ್ರದ ಪ್ರತಿ ಕೂಡ ಬಂದಿತ್ತು ಎಂದರೆ ಸರಿ. ವಾದ ಪತ್ರದಲ್ಲಿ 1ನೇ ಪ್ರತಿವಾದಿಯ ಕುಟುಂಬ ಸದಸ್ಯರ ವಿವರಗಳನ್ನು ಸ್ಪಷ್ಟವಾಗಿ ಬರೆದಿದ್ದರು ಎಂದರೆ ನನಗೆ ನೆನಪಿಲ್ಲ. ವಾದ ಪತ್ರದ ಪ್ರತಿ ಪಡೆದ ನಂತರ 1ನೇ ಪ್ರತಿವಾದಿಯ ಮಕ್ಕಳ ವಿವರಗಳ ಬಗ್ಗೆ ನಾನು ವಿಚಾರಣೆ ಮಾಡಿದ್ದುಂಟೇ? ಎಂದರೆ ನನಗೆ ನೆನಪಿಲ್ಲ. 1ನೇ ಪ್ರತಿವಾದಿ ವೆಂಕಟಪ್ಪ ವ್ಯವಸಾಯಗಾರನಾದರೂ ಆತ ಒಂದೇ ಸ್ಥಳದಲ್ಲಿ ಇರದಂತಹ ಅಲೆಮಾರಿ ಸ್ವಭಾವ ಹೊಂದಿದ್ದನೆಂದು ವಾದಿಗಳು ಸೂಚಿಸುತ್ತಾರೆ ಎಂದರೆ ನನ್ನ ಪ್ರಕಾರ 1ನೇ ಪ್ರತಿವಾದಿ ಜವಾಬ್ದಾರಿಯುತ ವ್ಯಕ್ತಿಯಾಗಿರುತ್ತಾರೆ. ನನಗೆ 2002-03 ರಿಂದಲೂ 1ನೇ ಪ್ರತಿವಾದಿಯ ಪರಿಚಯವಿತ್ತು. ನನಗೆ ಅವರು ನಾನು ಜಮೀನು ಖರೀದಿ ಮಾಡುವ ಸಮಯದಲ್ಲೇ ಪರಿಚಯವಾದರು. ನಾನು ಜಮೀನು ಖರೀದಿ ಮಾಡುವ ಮುಂಚೆ ಮತ್ತು ಜಮೀನು ಖರೀದಿ ಮಾಡಿದ ನಂತರ ನನಗೆ 1ನೇ ಪ್ರತಿವಾದಿ ಪರಿಚಯವಿರಲಿಲ್ಲ ಎಂದರೆ ಜಮೀನು ಖರೀದಿಗೆ ಮುಂಚೆಯೂ ಗ್ರಾಮದಲ್ಲಿ

ಪರಿಚಯವಿದ್ದರು. ನಾನು ಅವರ ಗ್ರಾಮಕ್ಕೆ ಆ ಸಮಯದಲ್ಲಿ ಹೋಗಿದ್ದೆ. ಅವರ ಮನೆಗೆ ಕೂಡ ಹೋಗಿದ್ದೆ. ಅವರ ಮನೆಯಲ್ಲಿ ಯಾರು ಯಾರು ಇದ್ದರು ಎಂದರೆ ಅವರು ಒಬ್ಬರೇ ಇದ್ದು, ಕುಳಿತು ಮಾತನಾಡಿದ್ದರು.

**(**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಿತು**).**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**